ಶ್ರೀ ಕಡಿದಾಳ್ ಮಂಜಪ್ಪ.—ಇಂತಿಷ್ಟೇ ವರ್ಷಗಳಲ್ಲಿ ಎಂದು ಹೇಳುವುದಕ್ಕಾಗುವುದಿಲ್ಲ. ಅದು ಹಣದ ಮೇಲೆ ಅವಲಂಬಿಸುತ್ತದೆ. ಹಣವಿದ್ದರೆ ಮಾಡಬಹುದು, ಇಲ್ಲದಿದ್ದರೆ ಕಷ್ಟವಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಇಲ್ಲಿ ಸೂಚಿಸಿರುವ ಮೂರು ಕೆರೆಗಳು 1953ನೇ ಸಾಲಿನಲ್ಲಿ ಒಡೆದು ಹೋಗಿದ್ದ ಕೆರೆಗಳಲ್ಲವೆ ?

Sri Kadidal MANJAPPA.—I want notice.

Bridge across Papagni near Yenagadale.

Q.—581. Sri M. C. ANJANEYA REDDY (Chintamani).—

Will the Government be pleased to state :—

(*a*) whether they are aware that travellers and vehicular traffic are put to much trouble near Yenagadale Village due to heavy floods of the Papagni river running across Chelur-Chintamani Road ;

(*b*) whether any estimate had been prepared previously for the construction of a bridge across this river;

(*c*) whether they intend to construct a bridge in the near future ?

A.—Sri Kadidal MANJAPPA (Minister for Revenue and Public Works).—

(*a*) Yes.

(*b*) Yes.

(*c*) Will be examined.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈ ಸೇತುವೆಗೆ ಅಂದಾಜು ಯಾವಾಗ ತಯಾರಾಗಿದ್ದು ?

ಶ್ರೀ ಕಡಿದಾಳ್ ಮಂಜಪ್ಪ.—1947-48ನೇ ಇಸವಿಯಲ್ಲಿ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಇಷ್ಟು ವರ್ಷಗಳೂ ಈ ಕೆಲಸವಾಗದೆ ಹಾಗೆಯೆ ಉಳಿದು ಕೊಂಡಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಕೋಲಾರ ಜಿಲ್ಲಾ ಬೋರ್ಡಿನವರು ಸೇತುವೆಯ ಕೆಲಸಕ್ಕೆ ತಮ್ಮ ಭಾಗದ ಹಣವನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಅದಕ್ಕೋಸ್ಕರ 1951ನೇ ಇಸವಿಯಲ್ಲಿ ಈ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಸರ್ಕಾರದವರು ತೀರ್ಮಾನಮಾಡಿದರು. ಈಗ ಅದನ್ನು ಪುನಃ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಡಿಸ್ಟ್ರಿಕ್ಟ್ ಬೋರ್ಡಿನವರು ದುಡ್ಡು ಕೊಟ್ಟರೆ ತಾನೇ ತಾವು ಪುನಃ ಪರಿಶೀಲನೆ ಮಾಡುವುದು ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಯೋಚನೆ ಮಾಡುತ್ತೇವೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಡಿಸ್ಟ್ರಿಕ್ಟ್ ಬೋರ್ಡಿನವರು ದುಡ್ಡು ಕೊಡದೆ ಇದ್ದುದರಿಂದ ಕೆಲಸ ನಿಂತು ಹೋಯಿತು ಎಂದು ಹೇಳಿದಿರಿ. ಆದ್ದರಿಂದ ಅವರು ದುಡ್ಡು ಕೊಟ್ಟರೆ ತಾನೇ ತಾವು ಪರಿಶೀಲನೆ ಮಾಡುವುದು ?

ಶ್ರೀ ಕಡಿದಾಳ್ ಮಂಜಪ್ಪ.—ಯಾವರೀತಿ ಹಣ ಕೊಡಬೇಕೆಂಬುದನ್ನು ಯೋಚನೆ ಮಾಡುತ್ತೇವೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಹಾಗಾದರೆ, ಅದನ್ನು ತಾವೇ ಮಾಡುತ್ತೀರಿ ಎಂದು ಅರ್ಥವೇ ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ನಿರ್ದಿಷ್ಟವಾಗಿ ಯಾವುದನ್ನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಪರಿಶೀಲನು ತ್ತೇವೆಂದು ಜವಾಬುಕೊಟ್ಟಿರಿ. ಅದಕ್ಕೋಸ್ಕರ ನಾನು ಕೇಳುತ್ತಿದ್ದೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಎಸ್ಟಿಮೇಟ್ ಬಂದ ಮೇಲೆ ಪರಿಶೀಲನೆ ಮಾಡುತ್ತೇವೆ.

Sri H. C. LINGA REDDY.—What is the value of this estimate ?

ಶ್ರೀ ಕಡಿದಾಳ್ ಮಂಜಪ್ಪ.—ಆಗಿನ ಕಾಲದಲ್ಲಿ 92,000 ರೂಪಾಯಿಗಳು ಆಗಿತ್ತು. ಈಗ ಅದು ಇನ್ನೂ ಜಾಸ್ತಿಯಾಗುತ್ತದೆ.

Sri H. C. LINGA REDDY.—Has a revised estimate been made in 1950-51 ?

ಶ್ರೀ ಕಡಿದಾಳ್ ಮಂಜಪ್ಪ.—1950-51 ರಲ್ಲಿ ಆಗಿದೆ.

Sri H. C. LINGA REDDY.—What is the value of the estimate according to the revised estimate ?

Sri Kadidal MANJAPPA.—ಅದು Rs. 92,000.

Sri H. C. LINGA REDDY.—Are the Government aware that during rainy season, bus traffic and other traffic will be stopped there and for weeks together there can be no traffic from this side of the river to the other side ?

Sri Kadidal MANJAPPA.—There is answer to question (*a*).

Sri H. C. LINGA REDDY.—Will the Government take it up early and finish it ?

Sri Kadidal MANJAPPA.—I want to see the estimate before committing myself.

High School at Chunchanakatte.

Q.—52. Sri S. H. THAMMIAH *alias* HANUMANTHEGOWDARA THAMMIAH (Krishnarajanagar).—

Will the Government be pleased to state :—

(*a*) the amount received by way of donation for the High School established at Chunchankatte, Krishnarajanagar Taluk ;

(*b*) the names of the donors ;

(*c*) the category to which it was considered by Government to belong, when the High School was sanctioned, whether District Board, Municipal or Aided ;

(*d*) who is carrying on the management of the High School and since when ;

(*e*) (i) whether receipts have been issued to the donors who have contributed money for the said High School building for the amount paid ; (ii) whether Government have audited the accounts in this respect ?

A.—**Sri A. G. RAMACHANDRA RAO** (Minister for Law and Education).—

(*a*) Rs. 12,000.

(*b*) Gurukula Samitee, Chunchanakatte Rural High School.

(*c*) Private High School.

(*d*) The District Board is carrying on the management of the High School since 8th June 1952.

(*e*) (i) The donation was adjusted in the bills of Sri Shankare Gowda, contractor for the work. No separate receipt was issued as the amount was adjusted in the bills, (ii) The accounts of the District Board have been audited to the end of 1952-53.

ಶ್ರೀ ಯು. ಎಂ. ಮಾದಪ್ಪ.—ಗುರುಕುಲ ಸಮಿತಿಯವರು ಡಿಸ್ಟ್ರಿಕ್ಟ್ ಬೋರ್ಡ್ ಟ್ರೆಜರಿಯಲ್ಲಿ ಹಣವನ್ನು ಡಿಪಾಜಿಟ್ ಮಾಡಿದ್ದಾರೆಯೇ ?

Sri A. G. RAMACHANDRA RAO.—It has passed through the District Board. That is the information I have got.

Sri U. M. MADAPPA.—I want to know whether they have deposited in the taluk treasury or district treasury ?

Sri A. G. RAMACHANDRA RAO.—The Government have not received that information so far.

High School at Kengeri.

Q.—171. **Sri A. V. NARASIMHA REDDY** (Bangalore South).—

Will the Government be pleased to state :—

(*a*) whether a proposal was made to them to start a High School at Kengeri, Bangalore South Taluk ;

(*b*) when that proposal was made ;

(*c*) whether that proposal has been approved ?

A.—**Sri A. G. RAMACHANDRA RAO** (Minister for Law and Education).—

(*a*) Yes.

(*b*) In July 1954.

(*c*) No.

ಶ್ರೀ ಎ. ವಿ. ನರಸಿಂಹರೆಡ್ಡಿ.—ಇಲಾಖೆಯವರು ಇಲ್ಲಿ ಒಂದು ಹೈಸ್ಕೂಲನ್ನು ತೆರೆಯಬೇಕೆಂದು ತಮಗೆ ಶಿಫಾರಸ್ಸು ಮಾಡಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ ; ಬೇರೆಯವರು exemption ಮಾಡಿ ಎಂದು ಒಂದು ಅಪ್ಲಿಕೇಷನ್ ಕೊಟ್ಟರು. ಅದಕ್ಕೆ ಸಾಧ್ಯವಿಲ್ಲವೆಂದು ಹೇಳಿದೆವು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಇಲಾಖೆ ಮುಖಾಂತರ ತಾನೇ ಅರ್ಜಿ ಬಂದಿರುವುದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ. ಮುಖ್ಯ ಮಂತ್ರಿಗಳ ಮುಖಾಂತರ ಬಂದಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಕೆಂಗೇರಿ ಗುರುಕುಲ ಆಶ್ರಮದವರು ಹೈಸ್ಕೂಲಿಗೆ ಬೇಕಾದ ಕಟ್ಟಡವನ್ನು ಬಿಟ್ಟುಕೊಡುತ್ತೇವೆಂದು ಹೇಳಿದಮೇಲೆ ತಾನೇ ಮುಖ್ಯ ಮಂತ್ರಿಗಳಿಗೆ ಅರ್ಜಿ ಕೊಟ್ಟಿದ್ದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈಗ ಈ ಪ್ರಪೋಸಲ್ ಪರಿಶೀಲನೆ ಮಾಡಿ ಅಲ್ಲಿ ಹೈಸ್ಕೂಲ್ ಪ್ರಾರಂಭ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ವರ್ಷ ಸಾಧ್ಯವಿಲ್ಲವೆಂದು ಅವರಿಗೆ ಜವಾಬು ಕೊಟ್ಟಿದ್ದೇವೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಮುಂದಿನ ವರ್ಷ ಪಾದರೂ ಇದನ್ನು ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ. ಟಿ. ಕೆಂಪರಾಜ್.—ಕೆಂಗೇರಿ ಗುರುಕುಲ ಆಶ್ರಮದಲ್ಲಿ ಕಟ್ಟಡ ಇದೆ ಅಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದೆ ಎಂಬುದು ಎಲ್ಲರಿಗೂ ಗೊತ್ತಿದೆ.

ಶ್ರೀ ಬಿ. ಟಿ. ಕೆಂಪರಾಜ್.—ಅಲ್ಲಿ ಇರುವ ಕಟ್ಟಡ ಹೈಸ್ಕೂಲಿಗೆ ಅನುಕೂಲವಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಹಳ ಅನುಕೂಲವಾಗಿಲ್ಲ ; ಆದರೆ ಅದನ್ನು ಉಪಯೋಗಿಸಿಕೊಳ್ಳಬಹುದು ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀ ಬಿ. ಟಿ. ಕೆಂಪರಾಜ್.—ಕೆಂಗೇರಿ ಹೋಬಳಿಯಲ್ಲಿ ಎಷ್ಟು ಮಿಡಲ್ ಸ್ಕೂಲುಗಳಿವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್ ಬೇಕು.

ಶ್ರೀ ಬಿ. ಟಿ. ಕೆಂಪರಾಜ್.—ಅಲ್ಲಿ ಇರತಕ್ಕಂಥ ಮಿಡ್ಲ್ ಸ್ಕೂಲು ಹುಡುಗರು ಸಿಟಿಗೆ ಬರಬೇಕಾದರೆ 12 ಮೈಲಿ ದೂರದಿಂದ ಬರಬೇಕಾಗುತ್ತದಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕೆಂತಲೂ ದೂರದಿಂದ ಮಿಡ್ಲ್ ಸ್ಕೂಲ್ ಹುಡುಗರು ಬರುತ್ತಾರೆ.

ಶ್ರೀ ಬಿ. ಟಿ. ಕೆಂಪರಾಜ್.—ಈ ಹೋಬಳಿಯಲ್ಲಿ ಹೈಸ್ಕೂಲ್ ಅತ್ಯಾವಶ್ಯಕ ಎಂದು ಸರ್ಕಾರದವರು ಮನಗಂಡಿಲ್ಲವೇ ?